

ಕೋಮಾಕ್ಕೆ ಜಾರಿರುವ ವ್ಯಕ್ತಿಯನ್ನು ಪೊರೆಯುತ್ತಿರುವ ಕುಟುಂಬದ ದಾರುಣ ಪರಿಸ್ಥಿತಿ ಮತ್ತು ಮನಸ್ಥಿತಿಗಳನ್ನು ತೋರಿಸುವ ಕಿರುಚಿತ್ರವಿದು.

■ ಗೌರಿ

# ಕಾಯಿಲೆ ಬಿದ್ದ ಮನುಷ್ಯನ ಸುತ್ತ...

ಕೋಮಾಕ್ಕೆ ಹೋದ ಗೆಳತಿ ಗುಣಮುಖಳಾಗುತ್ತಾಳೆ ಎಂಬ ನಂಬಿಕೆಯಿಂದ ಅನುದಿನವೂ ಆಸ್ಪತ್ರೆಗೆ ಹೋಗಿ ಅವಳ ಸೇವೆ ಮಾಡಿಕೊಂಡಿರುವ ಹುಡುಗನ ಬದುಕನ್ನು ಬಿಂಬಿಸುವ 'ಅಕ್ಟೋಬರ್' ಸಿನಿಮಾ 2018ರಲ್ಲಿ ಬಿಡುಗಡೆಯಾಗಿತ್ತು. ಈ ಸಿನಿಮಾವನ್ನು ನೆನಪಿಗೆ ತರುವ, ಆದರೆ ಅದಕ್ಕಿಂತ ಬೇರೆಯದೇ ಜಗತ್ತನ್ನು ಕಟ್ಟಿಕೊಡುವ ಕಿರುಚಿತ್ರ ಶೀತಲ್ ಮೆನನ್ ನಿರ್ದೇಶನದ 'ಸಿಬ್ಲಿಂಗ್ಸ್'.

ಆ ಮನೆಯ ಯಜಮಾನ ಎಷ್ಟೋ ದಿನಗಳಿಂದ ಕೋಮಾದಲ್ಲಿದ್ದಾನೆ. ಇಬ್ಬರು ಹೆಣ್ಣುಮಕ್ಕಳು ಅವನನ್ನು ನೋಡಿಕೊಳ್ಳುತ್ತಿದ್ದಾರೆ. ಜೊತೆಗೆ ಅವರ ಅಜ್ಜಿಯೂ ಆ ಮನೆಯಲ್ಲಿದ್ದಾಳೆ. ಕುಟುಂಬದ ಆಧಾರಸ್ತಂಭವಾಗಿರುವ ಯಜಮಾನನೇ ಕೋಮಾದಲ್ಲಿ ಮಲಗಿರುವಾಗ, ಅವನ ಆರೋಗ್ಯದ ಹೊಣೆ, ಕುಟುಂಬದ ನಿರ್ವಹಣೆಯ ಜವಾಬ್ದಾರಿಗಳನ್ನು ಹೊರುವವರಾರು? ಚಿಗುರೊಡೆಯುತ್ತಿರುವ ತಮ್ಮ ಬದುಕು, ಅಪ್ಪನ ಅನಾರೋಗ್ಯದ ಕಾರಣಕ್ಕೆ ಕಮರುತ್ತಿರುವುದನ್ನು ಕಣ್ಣಾರೆ ಕಾಣುತ್ತಲೂ ಏನೂ ಮಾಡಲು ಆಗದೇ ಇರುವ ಪರಿಸ್ಥಿತಿ ಆ ಹೆಣ್ಣುಮಕ್ಕಳದ್ದು.

ದೈಹಿಕ ಅನಾರೋಗ್ಯದ ಮೂಲಕ ಮನುಷ್ಯನ ಮನಸ್ಸಿನೊಳಗೇ ಅವಿತುಕೊಂಡಿರುವ ಮಾನಸಿಕ ಅನಾರೋಗ್ಯದ ಹಲವು ಆಯಾಮಗಳನ್ನು ಈ ಕಿರುಚಿತ್ರ ಬಿಚ್ಚಿಡುತ್ತಾ ಹೋಗುತ್ತದೆ.

ತಂಗಿ ಹೊಸ ಸ್ಟಾರ್ಟ್‌ಅಪ್ ಪಾಲುದಾರಿಕೆಯಲ್ಲಿ ತನ್ನ ಬದುಕನ್ನು ಚಿಗುರಿಸಿಕೊಳ್ಳುವ ಹರಸಾಹಸದಲ್ಲಿದ್ದಾಳೆ. ಅಕ್ಕನಿಗೆ ತನ್ನ ದುಡಿಮೆಯೆಲ್ಲ ಅಪ್ಪನ ಕಾಯಿಲೆಗೆ ಹೋಗುತ್ತಿರುವ ಸಂಕಟ. ಅವಳ ಸ್ನೇಹಿತನೂ ಅವಳನ್ನು ತೊರೆದು ವಿದೇಶಕ್ಕೆ ಹೋಗುವ ಸನ್ನಾಹದಲ್ಲಿದ್ದಾನೆ. ತಂಗಿಯ ಸ್ನೇಹವನ್ನು ಬಯಸಿ ಬರುವ ಹುಡುಗನೂ ಅವಳ ಅಪ್ಪ ಕೋಮಾದಲ್ಲಿದ್ದಾನೆ ಎಂಬುದನ್ನು ತಿಳಿದು ಹಿಂಜರಿದು ಹೊರಟುಹೋಗುತ್ತಾನೆ.



ಹೆಸರು: ಸಿಬ್ಲಿಂಗ್ಸ್ (ಹಿಂದಿ)
ನಿರ್ದೇಶನ: ಶೀತಲ್ ಮೆನನ್
ತಾರಾಗಣ: ಶಿವಾನಿ ತಾಂಕ್ಸಾಲೆ ಮತ್ತು ಶೀತಲ್ ಮೆನನ್

ಹೀಗೆ ತಂದೆಯ ಕಾಯಿಲೆ ಅವರನ್ನು ಹಲವು ರೀತಿಗಳಲ್ಲಿ ಶಾಪವಾಗಿ ಸುತ್ತಿ ಹೈರಾಣ ಮಾಡುತ್ತಿರುತ್ತದೆ. ಆ ಟ್ರ್ಯಾಪ್‌ನ ಮಧ್ಯವೇ ಅವರಿಗೆ ಕೆಲವು ಖುಷಿಯ ಕ್ಷಣಗಳೂ ಇವೆ. ಹಾ, ಅದು ಇರುವುದಲ್ಲ, ಅವರು ಸೃಷ್ಟಿಸಿಕೊಳ್ಳುವುದು. ಹಾಸಿಗೆಯಲ್ಲಿ ಮಲಗಿರುವ ಅಪ್ಪನ ಹುಟ್ಟಿದ ಹಬ್ಬದ ದಿನ ತಂಗಿ ಕೇಕ್ ತಂದು ಅಪ್ಪನ ಮಂಚದ ಎದುರಿಗಿಟ್ಟು ಸಂಭ್ರಮಿಸುತ್ತಾಳೆ. ಖರ್ಚು ಹೆಚ್ಚಾಗುತ್ತಿದೆ ಎಂದು ತಂಗಿಯ ಜೊತೆ ಜಗಳವಾಡುವ ಅಕ್ಕನೇ ಐಸ್‌ಕ್ಯಾಂಡಿಯನ್ನು ಮನೆಗೆ ತಂದು ತಂಗಿ–ಅಜ್ಜಿಗೆ ಕೊಟ್ಟು ತಾನೂ ತಿನ್ನುತ್ತಾಳೆ. ಒಡವೆಗಳೆಲ್ಲ ಮಾರಿಯಾಗಿದೆ, ಕಂಡಕಂಡವರ ಬಳಿ ಸಾಲ ಮಾಡಿಯಾಗಿದೆ. ಇನ್ನು ಚಿಕಿತ್ಸೆಗೆ ದುಡ್ಡು ಹೇಗೆ ಹೊಂದಿಸುವುದು ಎಂದು ಅಕ್ಕ ಸೋತು ತಂಗಿಯ ಹೆಗಲ ಮೇಲೆ ಒರಗಿದರೆ, ತಂಗಿ ಅಕ್ಕನ ಕೈ ಹಿಡಿದು ಮೆಲುವಾಗಿ ನರ್ತಿಸುತ್ತಾಳೆ. ಹಿಂದೆ ಜಗ್ಗುತ್ತಿರುವ ಬದುಕನ್ನು ಹಿಡಿದು ನಿಲ್ಲಿಸಲು ಅನುಕ್ಷಣವೂ ಪರದಾಡುತ್ತಿರುವ ಅವರಿಬ್ಬರ ಬದುಕಿನಲ್ಲಿ ಈ ಸಣ್ಣ ಸಣ್ಣ ಖುಷಿಯ ಕ್ಷಣಗಳು, ಮುಂದಿನ ಹೋರಾಟಕ್ಕೆ ಚೈತನ್ಯವನ್ನು ಮರುಪೂರಣಗೊಳಿಸಿಕೊಳ್ಳುವ ಗಳಿಗೆಗಳೂ ಹೌದು.

ಕುಟುಂಬ ವ್ಯವಸ್ಥೆ ಎನ್ನುವುದು ಎಲ್ಲ ಸರಿಯಿದ್ದಾಗ ಹೇಗೆ ನಮ್ಮ ಬಹುದೊಡ್ಡ ಶಕ್ತಿಯಾಗಿರುತ್ತದೆಯೋ, ಹಳಿತಪ್ಪಿದಾಗ ನಮ್ಮನ್ನು ನುಂಗಿನೊಣೆಯುವ ಮುಳ್ಳಿನ ಹಾಸಿಗೆಯಾಗಿಯೂ ಪರಿಣಮಿಸುತ್ತದೆ. ಕೌಟುಂಬಿಕತೆಯ ಈ ಎರಡನೇ ಮುಖವನ್ನು ತೋರಿಸುವ ಪ್ರಯತ್ನ ನಿರ್ದೇಶಕರದ್ದು. ಒಳ್ಳೆಯವರು–ಕೆಟ್ಟವರ ನಡುವಿನ ಸಂಘರ್ಷದ ಜನಪ್ರಿಯ ಮಾದರಿಯನ್ನು ಬಿಟ್ಟು ಮನುಷ್ಯನೊಳಗಿನ ಮಾನವೀಯತೆಯ ದೀಪ ಮತ್ತು ಅದನ್ನು ಸದಾ ಕಾಡುತ್ತಲೇ ಇರುವ ಸಣ್ಣತನಗಳ ಗಾಳಿಯ ನಡುವಿನ ಸಂಬಂಧವನ್ನು ಶೋಧಿಸುವ ಪ್ರಯತ್ನವಾಗಿ ಈ ಕಿರುಚಿತ್ರ ಮನಸ್ಸಲ್ಲಿ ಉಳಿಯುತ್ತದೆ. ಈ ಅನುಭವಕ್ಕೆ ಶಿವಾನಿ ತಾಂಕ್ಸಾಲೆ ಮತ್ತು ಶೀತಲ್ ಮೆನನ್ ಅವರ ನಟನೆಯ ಜುಗಲ್ಬಂದಿಯ ಕೊಡುಗೆಯೂ ದೊಡ್ಡದಿದೆ.

ಈ ಕಿರುಚಿತ್ರ ವೀಕ್ಷಣೆಗೆ bit.ly/2Y46T7c ಕೊಂಡಿ/ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.